ಓ ಎಸ್ ನಂ. 48/2019

ಡಿ ಡಬ್ಲ್ಯೂಃ 1

ದಿನಾಂಕ 01-07-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರಃ ಶ್ರೀ ಬಿ ಎಂ ಪಿ ವಕೀಲರಿಂದಃ

ಪ್ರಸ್ತುತ ದಾವೆಯನ್ನು ಯಾರು ಯಾರ ವಿರುದ್ದ ಯಾವ ಪರಿಹಾರಕ್ಕಾಗಿ ಸಲ್ಲಿಸಿದ್ದಾರೆಂದು ನನಗೆ ತಿಳಿದಿದೆ. ಗೋವಿಂದಪ್ಪ ಬಿನ್ ಮಲ್ಲಯ್ಯ ನನ್ನ ತಂದೆಯಾಗಿರುತ್ತಾರೆ. ವಾದಿಯಾದ ಸೋಮಪ್ರಸನ್ನರವರ ತಾಯಿ ಚಂದ್ರಮ್ಮ ಕೋಂ ಚಂದ್ರಪ್ಪ ಆಗಿರುತ್ತಾರೆ ಎಂದರೆ ಸರಿ. ವಾದಿ ಮತ್ತು ಅವರ ತಾಯಿಯ ಪರಿಚಯ ನನಗೆ ಇದೆ. ಸಾಕ್ಷಿ ಪುನಃ ವಾದಿ ಮತ್ತು ಅವರ ತಾಯಿಯ ಪರಿಚಯ ನನಗೆ ಇಲ್ಲ ಎಂದು ನುಡಿದಿರುತ್ತಾರೆ.

2. ದಾವಾ ಆಸ್ತಿಯಾದ ಸರ್ವೆ ನಂ.73/1 ರಲ್ಲಿ 1 ಎಕರೆ 28 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತು ವಾದಿಯ ತಾಯಿಯಾದ ಚಂದ್ರಮ್ಮನವರ ಹೆಸರಿನಲ್ಲಿ ಇರುವ ವಿಚಾರ ನನಗೆ ಗೊತ್ತಿದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ದಾವಾ ಆಸ್ತಿಯು ಮೂಲತಃ ಗೋವಿಂದಪ್ಪನವರ ಆಸ್ತಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಸ್ವತ್ತನ್ನು ಮೇಲ್ಕಂಡ ಚಂದ್ರಮ್ಮನವರು ಗೋವಿಂದಪ್ಪನವರಿಂದ ಖರೀದಿಸಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಪ್ರತಿವಾದ ಪತ್ರ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆ ಸಂದರ್ಭದಲ್ಲಿ ಯಾವ

ಉದ್ದೇಶಕ್ಕಾಗಿ ಈ ದಾವೆ ಸಲ್ಲಿಸಿದ್ದಾರೆಂದು ನಾನು ತಿಳಿದುಕೊಂಡಿರುತ್ತೇನೆ.

3. ದಾವಾ ಆಸ್ತಿಯನ್ನು ವಾದಿಯ ತಾಯಿ ಚಂದ್ರಮ್ಮನವರು ಗೋವಿಂದಪ್ಪನವರಿಂದ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಗೋವಿಂದಪ್ಪನವರು ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯನ್ನು ಚಂದ್ರಮ್ಮನವರು ಖರೀದಿಸಿದ ನಂತರ 1 ಎಕರೆ 28 ಗುಂಟೆ ಪೈಕಿ 14 ಗುಂಟೆ ಜಮೀನನ್ನು ಹೊರತುಪಡಿಸಿ ಉಳಿದ ಜಮೀನನ್ನು ಭೂಪರಿವರ್ತನೆ ಗೊಳಿಸಿರುತ್ತಾರೆ ಎಂದರೆ ಸುಳ್ಳು. ಸದರಿ ಭೂಪರಿವರ್ತನೆಗೊಂಡ ಸ್ಥಳದ ಪೂರ್ವ-ಪಶ್ಚಿಮಕ್ಕೆ ತಲಾ 7 ಗುಂಟೆಯಂತೆ ವಾದಿಯ ತಾಯಿ ಜಾಗವನ್ನು ಉಳಿಸಿಕೊಂಡಿರುತ್ತಾರೆ ಎಂದರೆ ಸುಳ್ಳು. ಭೂಪರಿವರ್ತನೆಗೊಂಡ 1 ಎಕರೆ 14 ಗುಂಟೆ ಜಾಗದಲ್ಲಿ ನಿವೇಶಗಳನ್ನು ಮಾಡಿ ಮಾರಾಟ ಮಾಡಲಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತಾದ 1 ಎಕರೆ 28 ಗುಂಟೆ ಸ್ವತ್ತಿನಲ್ಲಿ ನನಗಾಗಲಿ ನನ್ನ ತಂದೆಗಾಗಲಿ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ.

4. ನನ್ನ ತಂದೆ ಓ ಎಸ್ ನಂ.528/2011 ರಂತೆ ವಾದಿಯ ತಾಯಿ ಚಂದ್ರಮ್ಮ ಮತ್ತು ಕಡೂರಿನ ಪುರಸಭೆ ವಿರುದ್ಧ ಒಂದು ದಾವೆ ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನನ್ನ ತಂದೆ ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ

ತಂದೆಯಾದ ಗೋವಿಂದಪ್ಪನವರು ಅನ್ಯುನ್ಯವಾಗಿದ್ದು, ಒಂದೇ ಕುಟುಂಬದಲ್ಲಿ ವಾಸ ಇದ್ದೇವೆ ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗೆ ಸಂಬಂದಪಟ್ಟಂತೆ ನಾನು ಮತ್ತು ನನ್ನ ತಂದೆ ಮನೆಯಲ್ಲಿ ಚರ್ಚೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆ ಮೇಲ್ಕಂಡಂತೆ ಓ ಎಸ್ ನಂ.528/2011 ರ ದಾವೆಯನ್ನು ಹೂಡಿದ್ದ ವಿಚಾರವನ್ನು ನನಗೆ ಹೇಳಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ ನಂ.528/2011 ರ ದಾವೆಯಲ್ಲಿ ಕಾಣಿಸಿರುವಂತಹ ಚಕ್ಕುಬಂದಿ ಮತ್ತು ಪ್ರಸ್ತುತ ದಾವೆಯಲ್ಲಿ ನನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿರುವ ಚಕ್ಕುಬಂದಿ ಒಂದೇ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ.. ಪ್ರಸ್ತುತ ದಾವೆಯನ್ನು ವಾದಿ ಹೂಡಿರುವ ವಿಚಾರ ನನ್ನ ತಂದೆಗೂ ಸಹ ಗೊತ್ತು ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯ ವಿಚಾರವನ್ನು ನಂತರದಲ್ಲಿಯಾದರೂ ನನ್ನತ ಂದೆಯ ಜತೆ ಚರ್ಚೆ ಮಾಡಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ಓ ಎಸ್ ನಂ.528/2011 ರ ದಾವೆ ವಜಾವಾಗಿರುವ ವಿಚಾರ ಈ ದಾವೆಯಲ್ಲಿ ನಾನು ಹಾಜರಾದ ನಂತರದಲ್ಲಿಯಾದರೂ ಗೊತ್ತಾಯಿತ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ.

5. ಪ್ರಸ್ತುತ ದಾವೆಯಲ್ಲಿ ವಾದಿಯು ಸಲ್ಲಿಸಿರುವಂತಹ ದಾಖಲಾತಿಗಳ ಬಗ್ಗೆ ನಾನು ತಿಳಿದುಕೊಂಡಿದ್ದೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ. ಒಟ್ಟು 1 ಎಕರೆ 28 ಗುಂಟೆ ಆಸ್ತಿಯ ಪೈಕಿ ಭೂ ಪರಿವರ್ತನೆಗೊಂಡ ಪೂರ್ವದಲ್ಲಿ ವಾದಿಗೆ ಸೇರಿದ ಉಳಿದ 7

ಗುಂಟೆ ಜಾಗ ಇದೆ ಎಂದರೆ ಸುಳ್ಳು. ಸದರಿ 7 ಗುಂಟೆ ಜಾಗದಲ್ಲಿ 2019 ರಲ್ಲಿ ನಾನು ಒತ್ತುವರಿ ಮಾಡಿ ಒಂದು ಶೆಡ್ಡನ್ನು ನಿರ್ಮಿಸಿರುತ್ತೇನೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನನ್ನ ಜಾಗದಲ್ಲಿ ಶೆಡ್ಡನ್ನು ಮಾಡಲಾಗಿದೆ ಎಂದು ನುಡಿದಿರುತ್ತಾರೆ. ಸದರಿ 7 ಗುಂಟೆ ವಿಸ್ತೀರ್ಣದ ಆಸ್ತಿ ದಾವಾ ಸ್ವತ್ತಿನ ಒಟ್ಟು 1 ಎಕರೆ 28 ಗುಂಟೆ ವಿಸ್ತೀರ್ಣದ ಒಳಗೆ ಬರುತ್ತದೆ ಎಂದರೆ ಸುಳ್ಳು.

6.. ವಾದಿ ಬೆಳಗಾವಿಯಲ್ಲಿ ಸರ್ಕಾರಿ ನೌಕರಿಯಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ದುರುಪಯೋಗಪಡಿಸಿಕೊಂಡು ವಾದಿಗೆ ಸೇರಿದ 7 ಗುಂಟೆ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತೇನೆ ಎಂದರೆ ಸುಳ್ಳು. ಆ ರೀತಿ ಒತ್ತುವರಿ ಮಾಡಿಕೊಂಡ ಸಂಬಂದ ವಾದಿ ನನ್ನ ವಿರುದ್ದ ಕಡೂರು ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ ಎಂದರೆ ಸಾಕ್ಷಿ ಆ ವಿಚಾರ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅದರಂತೆ ಪೋಲೀಸರು ಠಾಣೆಗೆ ಕರೆಯಿಸಿ ವಿಚಾರಣೆ ಮಾಡಿರುತ್ತಾರೆ ಎಂದರೆ ಸುಳ್ಳು. ನನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿರುವಂತಹ ಚಕ್ಕುಬಂದಿಯಂತೆ ಯಾವುದೇ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಸಲುವಾಗಿ ನಾನು ನನ್ನ ಪ್ರತಿವಾದ ಪತ್ರದಲ್ಲಿ ಸುಳ್ಳು ಚಕ್ಕುಬಂದಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.